ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

Tuesday, the 22nd June, 1982 Ashada, 1, 1904 S.E.

The House met in the Assembly Chamber, Vidhana Soudha, at One of the Clock.

[Mr. SPEAKER (SRI K. H. RANGANATH) in the Chair]

STARRED QUESTIONS

(to which oral answers were given)

Allotment of Stray ites in B D. A.

49. SRI P. RAMDEV (Malleswaram)—Will the Minister for Housing and Urban Development be pleased to state :—

(a) whether it is a fact that the Bangalore Development Authority has allotted recently more than 600 sites as Stray sites ;

(b) the rules followed to convert these sites as Stray sites ;

(c) whether it has come to the notice of the Government that many sites have become stray sites out of these sites ;

(d) the norms followed in allotting these Stray sites ;

(e) whether Government had rejected earlier the resolutions passed by the Bangalore Development Authority in this behalf ?

SRI DHARAM SINGH(Minister for Housing and Urban Development)-

(a) Yes, Stray sites have been allotted.

(b) Stray sites have been allotted duly converting them as stray Sites for the following reasons :—*viz* ; if the allottees are failed to take possession of the sites allotted for any reason or if they have refused or if they have failed to remit the amount towards the cost of site or if the Public Works Division of Bangalore Development Authority have noticed any of the vacant sites at the time of formation of layouts or if the sites are intended to be allotted to the Backward Classes ;

(c) Yes.

(d) It has been ordered to allot Stray sites to any of the persons if they are eligible for allottment under the Bangalore City Improve-

ment Trust Board (Allotment of Sites) Rules, 1972 provided they have applied for the same and Stray sites were allotted only after considering as to their eligibility under the Rules.

(e) No.

ಶ್ರೀ ಪಿ. ರಾಮ್‌ದೇವ್.—ಮಾನ್ಯ ಅಧ್ಯಕ್ಷರೇ, ನಾನಂ ಕೇಳಿರತಕ್ಕಂಥ ಪ್ರಶ್ನೆ ಸ್ಪಷ್ಟವಾಗಿದೆ. ೧೯೭೮ರಲ್ಲಿ ಶ್ರೀ ಬಿ. ಟಿ. ಸೋಮಣ್ಣನವರು ಇದರ ಅಧ್ಯಕ್ಷರಾಗಿದ್ದರು. ೧೯೮೨ನೇ ಇಸವಿಯವರೆಗೆ ಬಿ.ಡಿ.ಎ. ನಲ್ಲಿ ನಡೆದಿರತಕ್ಕಂಥ ಕಥೆಗಳು ಎಲ್ಲರಿಗೂ ಗೊತ್ತಿರತಕ್ಕಂಥ ವಿಷಯವಾಗಿರುತ್ತದೆ. ಅವರ ಆರನೂರು ಸೈಟ್ಸನ್ನು ಅಲಾಟ್‌ಮೆಂಟ್ ಮಾಡಿದರು. ಪ್ರೆಸಿಡೆಂಟ್ ರೂಲ್ ಬಂದಾಗ ಅದು ರದ್ದು ಆಯಿತು. ಪ್ರೆಸಿಡೆಂಟ್ ರೂಲ್‌ನಿಂದ ಮಂಕ್ತವಾಗಿ ಪಾಪ್ಯುಲರ್ ಗೌವರ್ನಮೆಂಟ್ ಬಂದಾಗ ಏನಾಯಿತು ಸ್ವಾಮಿ ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಸೈಟ್ಸ್ ಕೊಟ್ಟಿದ್ದು ೧೯೭೭-೭೮ರಲ್ಲಿ, ಆದಾದನಂತರ ಮತ್ತೆ ೮೧ರಲ್ಲಿ ೧೩ ಸೈಟ್ಸ್ ಕೊಟ್ಟಿರುತ್ತದೆ. ಇದನ್ನು ಬಿಟ್ಟರೆ ಮತ್ತೆ ಇದುವರೆವಿಗೂ ಯಾವ ಸೈಟ್ಸನ್ನೂ ಕೊಟ್ಟಿಲ್ಲ.

ಶ್ರೀ ಪಿ. ರಾಮ್‌ದೇವ್.—ನಾನು ಹೇಳುವುದು ಈ ಒಂದು ಅವಧಿಯಲ್ಲಿ ಸೈಟ್ಸ್ ಅಲಾಟ್‌ಮೆಂಟ್ ಮಾಡಿರತಕ್ಕಂಥದ್ದರಲ್ಲಿ ದುರುಪಯೋಗವಾಗಿದೆ ಎಂದು ತಮ್ಮ ಸರ್ಕಾರವೇ ಸಿ.ಓ.ಡಿ. ಎನ್‌ಕ್ವೈರಿಗೆ ಕೂಡ ರೆಫರ್‌ಮಾಡಿ ಕೇಸ್‌ಗಳನ್ನು ಹಾಕಿರುತ್ತಾರೆ. ಕೇಸ್ ಹಾಕಿರತಕ್ಕಂಥದ್ದು ಯಾವ ಯಾವ ಅಧಿಕಾರಿಗಳ ಮೇಲೆ ಮತ್ತು ಯಾವ ಹಂತದಲ್ಲಿ ಮೊಕದ್ದಮೆಗಳು ಇರುತ್ತವೆ ಎಂದು ಹೇಳುತ್ತೀರಾ ಸ್ವಾಮಿ ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅಧ್ಯಕ್ಷರೇ, ಸೈಟ್ಸ್ ಅಲಾಟ್‌ಮೆಂಟ್ ಬಗ್ಗೆ ಯಾವ ಅಧಿಕಾರಿಗಳ ಮೇಲೂ ಕೇಸ್ ಹಾಕಿಲ್ಲ. ತಾವು ಕೇಳಿರುವ ಪ್ರಶ್ನೆ ಸೈಟ್ಸ್ ಬಗ್ಗೆ. ಅದರ ಬಗ್ಗೆ ಉತ್ತರವನ್ನು ಕೊಟ್ಟಿದ್ದೇವೆ. ಆರನೂರು ಸೈಟ್ಸನ್ನು ಅಲಾಟ್‌ಮೆಂಟ್ ಮಾಡಿದ್ದೇವೆ. ಸಿ.ಓ.ಡಿ. ಎನ್‌ಕ್ವೈರಿ ಬಗ್ಗೆ ನನ್ನ ಬಳಿ ಮಾಹಿತಿಯಿಲ್ಲ. ಈ ಬಗ್ಗೆ ಪ್ರತ್ಯೇಕ ಪ್ರಶ್ನೆ ಕೇಳಿದರೆ ಉತ್ತರವನ್ನು ಕೊಡಲಾಗುತ್ತದೆ.

ಶ್ರೀ ಪಿ. ರಾಮ್‌ದೇವ್.—ಆರನೂರು ಸೈಟ್ಸ್ ಕೊಟ್ಟಿರುತ್ತೇವೆಂದು ಹೇಳಿರುತ್ತೀರಲ್ಲ. ಯಾರು ಯಾರಿಗೆ, ಯಾವ ಯಾವ ಬೆಲೆಗೆ, ಎಲ್ಲೆಲ್ಲಿ ಕೊಟ್ಟಿದ್ದೀರಿ ಎನ್ನುವ ಬಗ್ಗೆ ಮಾಹಿತಿ ಕೊಡಲು ಸಾಧ್ಯವೇ ? ಹಾಗೂ ಅಫಿಷಿಯಲ್ಸ್, ಆಗಿ ಎಷ್ಟು ತೆಗೆದುಕೊಂಡಿದ್ದಾರೆ, ನಾನ್ ಅಫಿಷಿಯಲ್ಸ್ ಆಗಿ ಎಷ್ಟು ತೆಗೆದುಕೊಂಡಿದ್ದಾರೆ ಎಂಬುದರ ಬಗ್ಗೆ ಹೇಳಲಿಕ್ಕೆ ಬರುತ್ತದೆಯೇ ಸ್ವಾಮಿ ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ. ಅದನ್ನು ಹೇಳಬೇಕೆಂದರೆ ಒಂದು ದೊಡ್ಡ ಪಟ್ಟಿಯೇ ಆಗುತ್ತದೆ. ಯಾವ ಯಾವ ಏರಿಯಾದಲ್ಲಿ ಎಷ್ಟೆಷ್ಟು ಸೈಟ್ಸ್ ಕೊಟ್ಟಿದ್ದೇವೆ ಎಂದರೆ ಸುಮಾರು ೨೬ ಲೇ ಔಟ್‌ಗಳಲ್ಲಿ ಆರನೂರು ಸೈಟ್ಸ್‌ಗಳಿಗಿಂತಲೂ ಹೆಚ್ಚಿಗೆ ಸೈಟ್ಸನ್ನು ಕೊಟ್ಟಿದ್ದೇವೆ. ಬನಶಂಕರಿ ಮೂರನೆಯ ಹಂತ, ರಾಜಾಜಿನಗರ ಇಂಡಸ್ಟ್ರಿಯಲ್ ಎಸ್ಟೇಟ್ ಹೀಗೆ ೬೭೭ ಸೈಟ್ಸ್‌ಗಳನ್ನು ಹಂಚಿರುವ ಬಗ್ಗೆ ಹೇಳಬೇಕಾದರೆ ಒಂದು ದೊಡ್ಡ ಪಟ್ಟಿಯಿದೆ. ಅದನ್ನು ಬೇಕಾದರೆ ಪ್ರತ್ಯೇಕವಾಗಿ ತಮಗೆ ಒದಗಿಸಿ ಕೊಡುತ್ತೇನೆ.

ಶ್ರೀ ಪಿ. ರಾಮ್‌ದೇವ್.—ಸ್ವಾಮಿ, ತಾವು ಹಿಂದೆ ಸೈಟ್ಸ್ ಕೊಡುವ ಬಗೆ ಅಧಿಕಾರವನ್ನು ಕೊಟ್ಟಿದ್ದರಿ. ಈಗಿನ ಅಧಿಕಾರಿಗಳು ಸೈಟ್ಸ್ ಅಲಾಟ್ ಮಾಡಲು ಅಧಿಕಾರ ಕೊಡಬೇಕೆಂದು ಕೇಳಿದ್ದಾರೆ. ಈ ಬಗ್ಗೆ ಏನು ತೀರ್ಮಾನ ಮಾಡಿದ್ದೀರಿ ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಸದ್ಯಕ್ಕೆ ಏನೂ ತೀರ್ಮಾನ ತೆಗೆದುಕೊಂಡಿಲ್ಲ, ಅದು ಸರ್ಕಾರದ ಪರಿಶೀಲನೆಯಲ್ಲಿದೆ ಸರ್ಕಾರ ಯೋಚನೆ ಮಾಡಿ ಕೊಡಬೇಕಾಗುತ್ತದೆ. ಕೊಡುವುದಿದ್ದರೆ ಕೊಡುತ್ತಾರೆ, ಆದರೆ ಸದ್ಯಕ್ಕಂತೂ ಯಾವ ನಿರ್ಣಯವನ್ನೂ ತೆಗೆದುಕೊಂಡಿಲ್ಲ.

ಶ್ರೀ ಪಿ. ರಾಮ್‌ದೇವ್.—ಇತ್ತೀಚೆಗೆ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಒಂದು ಕಾಗದವನ್ನು ಬರೆದು ನೂರು ಸೈಟ್ಸ್‌ಗಳನ್ನು ಮುಖ್ಯಮಂತ್ರಿಗಳಿಗಾಗಿ ಅಲಾಟ್ ಮಾಡಲಿಕ್ಕೆ ಕೊಡಬೇಕು ಎಂದ

ಲೆಟರನ್ನು ಬರೆದಿದ್ದರು. ಅದು ಯಾವ ಆಧಾರದ ಮೇಲೆ ಬರೆದಿದ್ದರು ಮತ್ತು ಬಿ.ಡಿ.ಎ. ಅವರು ಒಪ್ಪಿಕೊಂಡು ಮುಖ್ಯಮಂತ್ರಿಗಳಿಗೆ ೧೦೦ ಸೈಟ್ಸ್‌ಗಳನ್ನು ಅಲಾಟ್ ಮಾಡಲು ಕೊಟ್ಟಿರುತ್ತಾರೆಯೇ ಎಂಬುದನ್ನು ತಿಳಿಸಬೇಕು ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಈ ಹಿಂದೆ ೧೦೦ ಸೈಟ್ಸನ್ನು ರಿಸರ್ವೇಷನ್ ಇಡಬೇಕೆಂದು ಕೇಳಿದ್ದು ನಿಜ. ಆಮೇಲೆ ಅದನ್ನು ನಮ್ಮ ಬೋರ್ಡ್‌ನವರು ತೀರ್ಮಾನ ತೆಗೆದುಕೊಂಡು ಬೋರ್ಡ್‌ನವರೇ ಅಲಾಟ್ ಮಾಡಬೇಕೆಂದು ಹೇಳಿದ ಮೇಲೆ ಕೊಟ್ಟಂಥ ಆದೇಶವನ್ನು ಹಿಂದೆ ತೆಗೆದುಕೊಂಡು ಕ್ಯಾನ್ಸಲ್ ಮಾಡಿ ಈವತ್ತಿನ ದಿವಸ ಬೋರ್ಡಿಗೆ ಈ ಅಧಿಕಾರ ವಹಿಸಿಕೊಟ್ಟಿದ್ದಾರೆ.

Non-Utilisation of Forest Grants

141. SMT. ANUSUYA GAJANANA SHARMA (Ankola)—Will the Minister for Rural Development and Panchayat Raj be pleased to state :—

(a) whether it has come to the notice of Government that hardship has caused for the development of forests, for not having utilised the forest grants allotted for the developmental works of forests to each of the taluk Boards in Uttara Kannada District ;

(b) if so, the measures taken by Government in this behalf ?

SRI B. RAMAIAH.(Minister for Rural Development and Panchayat Raj)—

(a) Forest grants have been utilised for various developmental activities. This amount need not be utilised for the development of forests alone. Forest Department will look after the development of forests.

(b) This question does not arise in view of reply furnished to Clause (a) above.

ಶ್ರೀಮತಿ ಅನಸೂಯ ಗಜಾನನ ಶರ್ಮ.—ಮಾನ್ಯ ಅಧ್ಯಕ್ಷರೇ, ಉತ್ತರ ಕನ್ನಡ ಜಿಲ್ಲೆಯಲ್ಲಿ ಪ್ರತಿ ತಾಲ್ಲೂಕು ಬೋರ್ಡಿಗೆ ಕೊಟ್ಟ ಫಾರೆಸ್ಟ್ ಗ್ರಾಂಟನ್ನು ಫಾರೆಸ್ಟ್ ಪ್ರದೇಶದ ಅಭಿವೃದ್ಧಿ ಕಾರ್ಯಗಳಿಗೆ ಉಪಯೋಗಿಸದೆ ಇರುವುದರಿಂದ ಈ ಭಾಗದ ಪ್ರಗತಿಗೆ ಆಗಿರುವ ತೊಂದರೆ ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ ಪ್ರಶ್ನೆಗೆ ತಾವು ಉತ್ತರ ಏನು ಕೊಟ್ಟಿದ್ದೀರಿ, ಇದು ಇಂಗ್ಲೀಷಿನಲ್ಲಿ ತಪ್ಪಾಗಿ ಅಚ್ಚಾಗಿದೆ.

ಅಧ್ಯಕ್ಷರು.— ಡೆವಲಪ್‌ಮೆಂಟ್ ಆಫ್ ಫಾರೆಸ್ಟ್ ಲೋನ್ ಎಂದು ಇದೆ.

ಶ್ರೀಮತಿ ಅನಸೂಯ ಗಜಾನನ ಶರ್ಮ.— ಇದರ ಬಗ್ಗೆ ಕನ್ನಡದಲ್ಲಿ ಕೊಟ್ಟಿರತಕ್ಕಂಥ ಉತ್ತರ ಸರಿಯಾಗಿ ಇದೆ.

ಶ್ರೀ ಬೇಗಾನೆ ರಾಮಯ್ಯ.— ಸನ್ಮಾನ್ಯ ಅಧ್ಯಕ್ಷರೇ, ಉತ್ತರಕನ್ನಡ ಜಿಲ್ಲೆಗೆ ವರ್ಷಕ್ಕೆ ೨೦ ಲಕ್ಷ ರೂಪಾಯಿಗಳಂತೆ ಅಂದರೆ ಅರಣ್ಯ ಭಾಗದಲ್ಲಿರತಕ್ಕಂಥ ಜಿಲ್ಲೆಗೆ ಪ್ರತ್ಯೇಕವಾಗಿ ಗ್ರಾಂಟನ್ನು ಕೊಡುತ್ತಿದ್ದೇವೆ. ತಾಲ್ಲೂಕ್ ಅಭಿವೃದ್ಧಿ ಮಂಡಲಿಗಳಿಂದ ಈ ಅಭಿವೃದ್ಧಿ ಕಾರ್ಯಗಳಿಗಾಗಿ ಕೊಡತಕ್ಕಂಥ ಗ್ರಾಂಟ್ ಎಷ್ಟೆಂದರೆ ೧೦೦ರಲ್ಲಿ ೯೦, ಅಂದರೆ ೮೯-೯೦ ಭಾಗದವರೆಗೆ ಕೊಡುತ್ತಿದ್ದೇವೆ. ಇನ್ನು ಉಳಿದ ೧೦ ಭಾಗ ಅರಣ್ಯವಿಲ್ಲದ ಭಾಗ, ಅಂದರೆ ರೆವಿನ್ಯೂ ಕಡಿಮೆ ಇರುವುದರಿಂದ ೧೯೭೨-೭೩ರಲ್ಲಿ ಒಂದೂವರೆ ಲಕ್ಷ ಕೊಟ್ಟಿದ್ದರೆ, ಅನಂತರ ಎರಡು ಲಕ್ಷ ಕೊಟ್ಟಿದ್ದೇವೆ. ಈಗ ನಾಲ್ಕೂವರೆ ಲಕ್ಷದಿಂದ ೫ ಲಕ್ಷದವರೆಗೆ